ಜಿಲ್ಲೆಯಲ್ಲಿ ಸವದತ್ತಿಗೆ 3ನೇ ಸ್ಥಾನ

ಸವದತ್ತಿ ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆದಂತ ವಿದ್ಯಾರ್ಥಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಸನ್ಮಾನಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಸವದತ್ತಿ

ತಾಲೂಕಿನಲ್ಲಿ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ 5201 ವಿದ್ಯಾರ್ಥಿಗಳಲ್ಲಿ 3294 ವಿದ್ಯಾರ್ಥಿಗಳು ಪಾಸಾಗುವ ಮೂಲಕ ಶೇ.63.33 ಫಲಿತಾಂಶದೊಂದಿಗೆ ಜಿಲ್ಲೆಯಲ್ಲಿ ಸವದತ್ತಿಯು 3ನೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ಬಿಇಒ ಮೋಹನ ದಂಡಿನ ತಿಳಿಸಿದ್ದಾರೆ. ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದುಕೊಂಡ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಅವರು, ಕಳೆದಬಾರಿ 2024ರಲ್ಲಿ ಸವದತ್ತಿಯು 5ನೇ ಸ್ಥಾನವನ್ನು ಪಡೆದುಕೊಂಡಿತ್ತು. ಈ ವರ್ಷದ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಾಧನೆ ಮಾಡುವ ಮೂಲಕ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದರು.ತಹಸೀಲ್ದಾರ್ ಮಲ್ಲಿಕಾರ್ಜುನ ಹೆಗ್ಗಣ್ಣವರ, ತಾಪಂ ಇಒ ಆನಂದ ಬಡಕುಂದರಿ, ಬಿ.ಎನ್.ಬ್ಯಾಳಿ, ಸುಧೀರ ವಾಘೇರಿ, ಎಂ.ಬಿ.ಕೊಪ್ಪದ, ಪ್ರಮೋದ ದೇಶಪಾಂಡೆ, ಬಿ.ಜಿ.ಸುಬ್ಬಾಪೂರಮಠ, ಎಸ್.ಎಸ್.ನಾಯ್ಕರ, ಎ.ಬಿ.ಕಾಮಣ್ಣವರ, ಎಂ.ಎನ್.ಕರಡಿಗುಡ್ಡ, ಆರ್.ಎಮ್.ಭಜಂತ್ರಿ, ವಿ.ಸಿ.ಹಿರೇಮಠ, ಸುರೇಶ ಬೆಟಗೇರಿ, ವಿಠ್ಠಲ ರಾವಳ, ರವಿ ನಲವಡೆ, ರಾಮಚಂದ್ರಪ್ಪ ಇತರರು ಉಪಸ್ಥಿತರಿದ್ದರು.

ಕಿತ್ತೂರು: ಶೇ.68.26 ರಷ್ಟು ಫಲಿತಾಂಶ

• **ಕನ್ನಡಪ್ರಭ ವಾರ್ತೆ** ಚನ್ನಮ್ಮನ ಕಿತ್ತೂರು

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.68.26 ರಷ್ಟು ಫಲಿತಾಂಶ ಹೊಂದುವ ಮೂಲಕ ಕಿತ್ತೂರು ತಾಲೂಕು ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದು ಬಾಲಕಿಯರು ಮೇಲುಗೈ ಸಾಧಿಸಿದ್ದಾರೆ.

ಚನ್ನಮ್ಮನ ಕಿತ್ತೂರು ತಾಲೂಕಿನಾದ್ಯಂತ ಒಟ್ಟು 1588 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದರು. ಈ ಪರೀಕ್ಷೆಯಲ್ಲಿ 1095 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಬೆಳಗಾವಿ ಜಿಲ್ಲೆಯಲ್ಲಿಯೇ ಕಿತ್ತೂರು ತಾಲೂಕಿಗೆ ಪ್ರಥಮ ಸ್ಥಾನವನ್ನು ದೊರಕಿಸಿಕೊಟ್ಟಿದ್ದು ಹೆಮ್ಮೆಯ ಸಂಗತಿಯಾಗಿದೆ.

ಖೋದಾನಪೂರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಸ್ವಾತಿ ತಿಗಡಿ 622 ಅಂಕ ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದರೆ, ತಾಲೂಕಿನ ವೀರಾಪೂರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಲಕ್ಷ್ಮೀ ಅಂಬಡಗಟ್ಟಿ 618 ಅಂಕ ಪಡೆದು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಇದೇ ಶಾಲೆಯ ಸೌಭಾಗ್ಯ ವಸ್ತ್ರದ 616 ಅಂಕ ಪಡೆದು ತಾಲೂಕಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದು ತಾಲೂಕಿನಲ್ಲಿಯೂ ವಿದ್ಯಾರ್ಥಿನಿಯರು ಮೇಲುಗೈ ಸಾಧಿಸಿದ್ದಾರೆ. ಈ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಶಾಸಕ ಬಾಬಾಸಾಹೇಬ ಪಾಟೀಲ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ ತುಬಾಕಿ ಸೇರಿದಂತೆ ಎಲ್ಲ ಶಿಕ್ಷಕ ವೃಂದ ಹಾಗೂ ನಾಗರಿಕರು ಅಭಿನಂದನೆ ಸಲ್ಲಿಸಿದ್ದಾರೆ.

> **ಸ್ಪರ್ಧಾತ್ಮಕ ಯುಗದಲ್ಲಿ ಗುಣಾತ್ಮಕ ಶಿಕ್ಷಣದ ಅವಶ್ಯಕತೆ ಇದೆ. ಇದೀಗ ಕಿತ್ತೂರು ತಾಲೂಕು ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಪಡೆದಿದ್ದು ಹೆಮ್ಮೆ ತಂದಿದೆ. ಈ ಪ್ರಯತ್ನವನ್ನು ಎಂದಿಗೂ ಕೈ ಬೀಡದೇ ರಾಜ್ಯಕ್ಕೆ ಕಿತ್ತೂರು ತಾಲೂಕು ಪ್ರಥಮವಾಗಿಸುವ ಗುರಿ ನನ್ನದಿದ್ದು ಇದಕ್ಕೆ ಶಿಕ್ಷಕರ ಬೆಂಬಲದ ಅವಶ್ಯಕತೆಯೂ ಇದೆ. ಈ ಪರೀಕ್ಷೆಯಲ್ಲಿ ಸಾಧನೆ ಮಾಡಿರುವ ಎಲ್ಲ ವಿದ್ಯಾರ್ಥಿಗಳಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.**
>
> • **ಬಾಬಾಸಾಹೇಬ ಪಾಟೀಲ,** ಶಾಸಕರು.

ಮಯೂರ ಆಂಗ್ಲ ಶಾಲೆಗೆ ಉತ್ತಮ ಫಲಿತಾಂಶ

• **ಕನ್ನಡಪ್ರಭ ವಾರ್ತೆ** ಗೋಕಾಕ

ಎಸ್ಸೆಸ್ಸೆಲ್ಸಿ-2025ರ ಪರೀಕ್ಷೆಯಲ್ಲಿ ನಗರದ ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಮಯೂರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಾದ ಕು.ನಿರ್ಮಿತಾ ಮಂಜುನಾಥ ಸವದತ್ತಿ 625 ಪೈಕಿ 622 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ, ಕು.ಶ್ರೇಯಾ ವಾರೆಪ್ಪನವರ - ಸೃಷ್ಟಿ ಸೂರ್ಯವಂಶಿ 625 ಪೈಕಿ 609 ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನ, ಕು.ಮೃದುಲಾ ಕಿರಣಕುಮಾರ 625 ಪೈಕಿ 600 ಅಂಕಗಳನ್ನು ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದಿಕೊಂಡಿದ್ದಾರೆ. ಒಟ್ಟು 17 ವಿದ್ಯಾರ್ಥಿ ಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾದರೆ, 37 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಶಾಲೆಯು ಒಟ್ಟಾರೆ ಫಲಿತಾಂಶ ಶೇ.83 ಪಡೆದುಕೊಂಡಿರುತ್ತದೆ. ವಿದ್ಯಾರ್ಥಿಗಳ ಈ ಸಾಧನೆಗೆ ವಿಧಾನ ಪರಿಷತ್ ಸದಸ್ಯರು ಹಾಗೂ ಸಂಸ್ಥೆಯ ಚೇರಮನ್ ಲಖನ್ ಜಾರಕಿಹೊಳಿ, ಸಂಸ್ಥೆಯ ಕಾರ್ಯ ದರ್ಶಿ ಸದಾನಂದ ಕಲಾಲ, ಶಾಲೆಯ ಮುಖ್ಯೋಪಾಧ್ಯಾಯರಾದ ಸುಚೇತ್ರಾ ಹತಪಾ ಕಿ, ಶಾಲೆಯ ಆಡಳಿತಾಧಿಕಾರಿಗಳಾದ ಎಸ್.ಡಿ.ಮುರಗೋಡ ಸಿಬ್ಬಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಮಹಾವೀರ ಪ್ರೌಢಶಾಲೆ ಸಾಧನೆ

• **ಕನ್ನಡಪ್ರಭ ವಾರ್ತೆ** ಹುಕ್ಕೇರಿ

ಪಟ್ಟಣದ ಪ್ರತಿಷ್ಠಿತ ಮಹಾವೀರ ಶಿಕ್ಷಣ ಸಂಸ್ಥೆಯ ಮಹಾವೀರ ಪ್ರೌಢಶಾಲೆಗೆ ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಾಗಿದೆ. 24 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದು, ಶ್ಲೋಕ ಬಿಲಕಾರ ಶೇ.94.24 (ಪ್ರಥಮ), ಶ್ರೀದೇವಿ ಕಬ್ಬೂರಿ ಶೇ.91.84 (ದ್ವಿತೀಯ), ಉಮರಪಾರೂಖ್ ಸಯ್ಯದ ಶೇ. 90.56 (ತೃತೀಯ) ರಷ್ಟು ಅಂಕ ಪಡೆಯುವ ಮೂಲಕ ಪ್ರೌಢಶಾಲೆಗೆ ಕ್ರಮವಾಗಿ ಮೂರು ಸ್ಥಾನಗಳನ್ನು ಹಂಚಿಕೊಂಡಿದ್ದಾರೆ. ಸಂಸ್ಥೆಯ ಅಧ್ಯಕ್ಷ ಮಹಾವೀರ ನಿಲಜಗಿ, ಉಪಾಧ್ಯಕ್ಷ ಪ್ರಜ್ವಲ ನಿಲಜಗಿ, ಮುಖ್ಯ ಶಿಕ್ಷಕ, ಬೋಧಕ-ಬೋಧಕೇತರ ಸಿಬ್ಬಂದಿ ಮೆಚ್ಚುಗೆ ವ್ಯಕ್ತಪಡಿಸಿದೆ.

PUBLIC NOTICE

That my client Smt. Kasturi W/o Ashok Padnad of No. 93, 2 Cross, 6th Main, Shankar Nagar, Bangalore North, Nandini Layout, Bangalore-560096, has lost Original Mother Sale Deed No Book No 5515/2000-2001 with respect to Plot No 06 out of R.S. No 274/3, RDPR No: 150400303500105509 situated at Mutaga Village, To&Dist Belagavi, has been lost when proceeding from RPD Corner to Deshmukh Road for taking the zerox, also filed Complaint to Tilakwadi Police station, Belagavi. If anybody including any financial institutions is having any manner of right, title, interest and whatsoever manner over the above said property shall file their written objection to the following address with supporting documents, within 7 days from today, otherwise it will be treated as there is no objection from anybody and my client will complete the sale transaction.

BELAGAVI. Date: 02/05/2025

Sd/- **MANJUNATH T. HEGDE** Advocate
CTS NO. 184, Guruwar Peth, Tilakwadi, Belagavi. Mobile No.9448634343

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತಕಛೇರಿ: ದಿಫೇರ್‌ವೇ, ನೆಲಮತ್ತು ಮೊದಲನೇಮಹಡಿ, ಸರ್ವೆ ಸಂ.10/1,11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರಿಟೈಜೇಷನ್ ಅಂಡ್ ರೀಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ-ಸಾಲಗಾರ/ಜಾಮೀನುದಾರ/ ಹೆಸರು	13-2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ ದಿನಾಂಕ 01.05.2025 ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎಸ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎಸ್‌ಆರ್	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	31139630000539	1) ಶ್ರೀಮತಿ ಸುರೇಖಾ ರಾಥೋಡ್, 2) ಶ್ರೀ ಮನುಹರ್ ರಾಥೋಡ್	10.06.2024	11.03.2025	ರೂ. 6,25,543.18 (ಆರು ಲಕ್ಷದ ಇಪತ್ತೈದು ಸಾವಿರದ ಐದುನೂರ ನಲವತ್ತೂರು ರೂ. ಮತ್ತು ಹದಿನೆಂಟು ಪೈಸೆ ಮಾತ್ರ)	14.05.2025 Time: 09:30 AM to 05:00 PM	ರೂ. 11,55,000/- (ಹನ್ನೊಂದು ಲಕ್ಷದ ಐವತ್ತೈದು ಸಾವಿರ ರೂ. ಮಾತ್ರ)	ರೂ. 1,15,500/- (ಒಂದು ಲಕ್ಷದ ಹದಿನೈದು ಸಾವಿರದ ಐದುನೂರು ರೂ. ಮಾತ್ರ)	20.05.2025 @ 02:00 PM	19.05.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.
	ಭದ್ರತಾ ಆಸ್ತಿಯ ವಿವರಣೆ : ಮನೆಯ ಆಸ್ತಿ ಆಶ್ರಯಾ ಸಿ.ಆರ್. ಸಂ. 158/92-93, ಪ್ಲಾಟ್ ಸಂ. 33, ಅಳತೆ 01 ಗುಂಟೆ 01 ಆನ ಮತ್ತು 08 ಪೈಸ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟಾರೆ: 1200 ಚದರ ಅಡಿ, (30 ಅಡಿ X 40 ಅಡಿ= 1200 ಚದರ ಅಡಿ) ಆರ್‌ಎಸ್ ಸಂ. 1057/*A L.T. 01ರಲ್ಲಿ , ಭಾವಿನಕಟ್ಟಿ ಮಹಾಲ್‌ಬಾಗಾಯು ಗ್ರಾಮ, ತಾ: ವಿಜಯಪುರ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ಸಂ. 44, ಉತ್ತರಕ್ಕೆ: ಪ್ಲಾಟ್ ಸಂ. 34, ದಕ್ಷಿಣಕ್ಕೆ: ರಸ್ತೆ.								
2	45399630000249	1) ಶ್ರೀ ಅಮಿತ್ ದತ್ತರಾಮ್ ಖಾಂಡೇಕರ್, 2) ಶ್ರೀ ದತ್ತರಾಮ್ ಎಲ್ ಖಾಂಡೇಕರ್, 3) ಶ್ರೀ ಪ್ರಶಾಂತ್ ಡಿ ಖಾಂದೇಕರ್	08.08.2024	19.04.2025	ರೂ. 6,04,619.42/- (ಆರು ಲಕ್ಷದ ನಾಲ್ಕು ಸಾವಿರದ ಆರುನೂರ ಹತ್ತೊಂಭತ್ತು ರೂ. ಮತ್ತು ನಲವತ್ತೆರಡು ಪೈಸೆ ಮಾತ್ರ)	23.05.2025 Time: 09:30 AM to 05:00 PM	ರೂ. 15,86,000/- (ಹದಿನೈದು ಲಕ್ಷದ ಎಂಭತ್ತಾರು ಸಾವಿರ ರೂ. ಮಾತ್ರ)	ರೂ. 1,58,600/- (ಒಂದು ಲಕ್ಷದ ಐವತ್ತೆಂಟು ಸಾವಿರದ ಆರುನೂರು ರೂ. ಮಾತ್ರ)	06.06.2025 @ 02:00 PM	05.06.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ.,ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.
	ಭದ್ರತಾ ಆಸ್ತಿ: ಸಕಲ ಸಮಸ್ತವೂ ಸೇರಿದ ಆಸ್ತಿಯ ಮುನಿಸಿಪಲ್ ಸಂ.233/1, ಸಿಟಿಎಸ್ ಸಂ.3525, ಅಳತೆ 214-6/9 ಚ.ಗಜ ಅಂದರೆ 1935.75 ಚ.ಅ. ಪೈಕಿ ಉತ್ತರ ಭಾಗದ ಹಿಸ್ಸಾ ಅಳತೆ ಪೂರ್ವದಿಂದ ಪಶ್ಚಿಮಕ್ಕೆ - 56 ಮತ್ತು ಉತ್ತರದಿಂದ ದಕ್ಷಿಣಕ್ಕೆ : 9'4 1/2 =525 ಚ.ಅ.ಅಡಿ, ಉಪ್ಪಾರ ಗಲ್ಲಿ ಖಾಸ್‌ಬಾಗ್, ಬೆಳಗಾವಿ, ಸಿಸಿಬಿ ಬೆಳಗಾವಿ ಮತ್ತು ಎಸ್‌ಆರ್‌ಓ ಬೆಳಗಾವಿಯ ವ್ಯಾಪ್ತಿಗೊಳಪಟ್ಟಿದೆ. ಮತ್ತು ಈ ಕೆಳಗಿನಂತೆ ಚಕ್ಕುಬಂದಿ: ಪೂರ್ವಕ್ಕೆ: ಮುಖ್ಯ ರಸ್ತೆ, ಪಶ್ಚಿಮಕ್ಕೆ: ಗಜಾನನ ಖಾಂಡೇಕರಗೆ ಹಂಚಿಕೆಯಾದ ಆಸ್ತಿ, ಉತ್ತರಕ್ಕೆ: ಸಿಟಿಎಸ್ ನಂ.3524ರ ಸಾಮಾನ್ಯ ಗೋಡೆ ಶ್ರೀ ಮೋಹನ್ ದಾವಲೆರವರಿಗೆ ಸೇರಿದ್ದು, ಮತ್ತು ದಕ್ಷಿಣಕ್ಕೆ -ಪಾರ್ಟ್ ಸಂ.2 ತನ್ನದೇ ಆದ ಪಂಡ್‌ನಿಂದ ಗೋಡೆ ನಿರ್ಮಿಸಿದ್ದಾರೆ ಮತ್ತು ನಂತರದಲ್ಲಿ ಆಸ್ತಿಯ ಅಳತೆ ಪೂರ್ವಕ್ಕೆ : 56 ಮತ್ತು ದಕ್ಷಿಣ ಉತ್ತರ 3 ಶ್ರೀ ಗಜಾನನ ಮತ್ತು ಅವರ ಸಂಬಂಧಿಕರಿಗೆ ಬಿಟ್ಟು ನಂತರ ಪಾರ್ಟ್ ಸಂ.1ಗೆ ಹಂಚಿಕೆಯಾದ ಆಸ್ತಿ.								

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆII-4 ಕ್ಲೋಸರ್ ಮೂಲಕ **https://bankauctions.in & www.foreclosureindia.com.** ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿನಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆII-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. **8142000809. Email id: info@bankauctions.in / srinivas@bankauctions.in.** ಇವರನ್ನು ಸಂಪರ್ಕಿಸುವುದು. ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 6362951653), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸಾಯಿದಾ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್‌ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಆದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸ